(ಇ) ರಾಜ್ಯದಲ್ಲಿ ಉಂಟಾಗಿರುವ ಬೀದಿನಾಯಿ ಕಾಟದ ಬಗ್ಗೆ:

ಶ್ರೀ ಹೆಚ್. ಆಂಜನೇಯ (ಭರಮಸಾಗರ) :- ಮಾನ್ಯ ಅಧ್ಯಕ್ಷರೆ, ಕಳೆದ ಒಂದು ವಾರದಿಂದ ಬೀದಿ ನಾಯಿಗಳ ಮಾರಣಹೋಮವನ್ನು ತಡೆಗಟ್ಟುವ ವಿಚಾರದಲ್ಲಿ ಸರ್ಕಾರದ ಮೇಲೆ ಒತ್ತಾಯ ಹಾಕುವುದಕ್ಕೆ ನನಗೆ ಅವಕಾಶ ಮಾಡಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಾ ಬಂದೆ. ಕೊನೆಗೆ ಅಧಿವೇಶನ ಮುಗಿಯುವ ದಿನ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ, ಅದಕ್ಕೆ ತಮಗೆ ಧನ್ಯವಾದಗಳು. ಈ ಭೂಮಿ ಮೇಲೆ ಹುಟ್ಟುವಂತಹ ಪಶುಪಕ್ಷಿಗಳು ಮತ್ತು ಮನುಷ್ಯ ಇರಬಹುದು, ಎಲ್ಲಾ ಜೀವಾತ್ಮಗಳಿಗೆ ಬದುಕುವ ಹಕ್ಕಿದೆ. ಯಾವುದೇ ಪಶುಪಕ್ಷಿಗಳನ್ನು ಕೊಲ್ಲುವಂತಹ ಅಧಿಕಾರ ಸರ್ಕಾರಕ್ಕೂ ಇಲ್ಲ. ಮತ್ತು ಯಾವ ಸಮಾಜಕ್ಕೂ ಕೂಡ ಇಲ್ಲ. ಈ ನೆಲದಲ್ಲಿ ಕ್ರಾಂತಿಯೋಗಿ ಬಸವಣ್ಣನವರು "ದಯವೇ ಧರ್ಮದ ಮೂಲವಯ್ಯ" ಎಂದು ವಿಶ್ವಕ್ಕೆ ದಯದ ಬಗ್ಗೆ ಹೇಳಿದ ದಯಾವಂತನನ್ನು ಸೃಷ್ಟಿ ಮಾಡಿದಂತಹ ನೆಲ.

ಈ ನೆಲದಲ್ಲಿ ನಿರ್ದಾಕ್ಷಿಣ್ಯವಾಗಿ ನಾಯಿಗಳನ್ನು ಕೊಲ್ಲುವಂತಹ ಕಾರ್ಯ ಏನು ನಡೆಯುತ್ತಿದೆ, ಇದು ನಿಜಕ್ಕೂ ಅವಮಾನದ ಸಂಗತಿ. ಇದು ಅನಾಗರೀಕ ಪ್ರವೃತ್ತಿ. ನಾಯಿ ಮನುಷ್ಯನ ಸಂಗಾತಿ. ನಾಯಿಯನ್ನು ಪ್ರತಿಯೊಬ್ಬರು ಕೂಡ ಸಾಕುತ್ತಾರೆ. ಅದು ಪ್ರತಿಯೊಬ್ಬರ ಮನೆಯನ್ನು ಕಾಯುತ್ತದೆ. ನಾಯಿ ಮನುಷ್ಯನಿಗೆ ನಿಷ್ಠೆಯಿಂದಿರತಕ್ಕಂಥ ಪ್ರಾಣಿ ಎಂದು ನಾವು ಇದನ್ನು ಪ್ರೀತಿಸುತ್ತೇವೆ. ಯಾವುದೋ ಒಂದು ನಾಯಿ ಮಗುವನ್ನು ಕಚ್ಚಿತು ಎನ್ನುವ ಕಾರಣಕ್ಕೆ ಇಡೀ ನಾಯಿಯ ಸಂತತಿಯನ್ನು ಮಾರಣಹೋಮ ಮಾಡಿ ನಿರ್ನಾಮ ಮಾಡುವುದಕ್ಕೆ ಹೊರಟಿರತಕ್ಕಂಥಾದ್ದು ಸರಿಯಲ್ಲ. ತಾವು ದಯಾವಂತ ಅಧ್ಯಕ್ಷರು, ನಮಗೆ ದಯೆ ಇರಬೇಕು. ಆದುದರಿಂದ ದಯೆಯಿರುವಂತಹ ಈ ಸರ್ಕಾರ ಕೂಡಲೇ ಈ ನಾಯಿಗಳ ಮಾರಣಹೋಮವನ್ನು ನಿಲ್ಲಸಬೇಕು. ನಾಯಿಗಳಿಗೂ ಕೂಡ ಮನುಷ್ಯನಂತೆ ಈ ನೆಲದಲ್ಲಿ ಬದುಕುವಂತಹ ಅವಕಾಶವನ್ನು ಕಲ್ಪಿಸಿಕೊಡಬೇಕು. ಇವತ್ತು ಏನು ಹುಚ್ಚುನಾಯಿಗಳಿವೆ, ಅಂತಹ ನಾಯಿಗಳನ್ನು ಕಾರ್ಪೋರೇಷನ್‌ನವರು, ನಗರಪಾಲಿಕೆಯವರು, ಸ್ಥಳೀಯ ಸಂಸ್ಥೆಯವರು ಕರೆತಂದು ಸರಿಯಾದ ಚಿಕಿತ್ಸೆಯನ್ನು ಕೊಟ್ಟು, ಅದಕ್ಕೆ ದೊಡ್ಡಿಯ ರೀತಿಯಲ್ಲಿ ವ್ಯವಸ್ಥೆ ಮಾಡಿ, ಅದರಲ್ಲಿ ಕೂಡಿ ಹಾಕಿ ಅದನ್ನು ಗುಣಪಡಿಸತಕ್ಕಂಥಾದ್ದು ಮಾನವನ ಕರ್ತವ್ಯ. ಒಂದು ಹುಚ್ಚು ನಾಯಿ ಯಾರಿಗೋ ಕಡಿಯಿತು ಎಂದ ತಕ್ಷಣ ಇಡೀ ನಾಯಿಯ ಸಂತತಿಯನ್ನು ನಿರ್ನಾಮ ಮಾಡುವಂಥಾದ್ದು ಸರಿಯಲ್ಲ.

ಇವತ್ತು ಒಬ್ಬ Parliament ಗೆ ಬಾಂಬ್ ಹಾಕಿದ. ಅವನಿಗೆ ಕೋರ್ಟ್‌ನಲ್ಲಿ ಗಲ್ಲಿಗೆ ಹಾಕುತ್ತೇವೆ ಎಂದಾಗ ಬೇಡ ಎಂದು ಹೇಳಿದರು. ನೋಡಿ ಇಲ್ಲಿ ಎಷ್ಟು ದಯೆಯಿದೆ. ಮನುಷ್ಯ ಏನು ಬೇಕಾದರೂ ಮಾಡಬಹುದು, ಆದರೆ ಅವನಿಗೆ ಗಲ್ಲಿಗೆ ಹಾಕಬೇಡಿ ಎಂದು ಹೇಳುತ್ತಾರೆ. ಆದರೆ ಆ ಮೂಕಪ್ರಾಣಿಗಳು ಏಕೆ ಮನುಷ್ಯನನ್ನು ಕಚ್ಚಿದವು ಎನ್ನುವುದರ ಬಗ್ಗೆ ಮೂಲಭೂತವಾಗಿ ನೀವು ಯೋಚನೆ ಮಾಡಬೇಕು. ಇವತ್ತು ಅವುಗಳಿಗೆ ಆಹಾರ ಇಲ್ಲ. ಇವತ್ತು ನಮ್ಮ ಹಟ್ಟಿಗಳಲ್ಲಿ ಹರಿಜನ ಕಾಲೋನಿ, ಗೊಲ್ಲರಹಟ್ಟಿ, ಲಿಂಗಾಯಿತರ ಹಟ್ಟಿ ಇರಬಹುದು, ನಾವು ಅಲ್ಲಿರುವಂತಹ ಬೀದಿನಾಯಿಗಳಿಗೆ ನಮ್ಮ ಊಟವಾದ ಮೇಲೆ ಊಟವನ್ನು ಹಾಕುತ್ತೇವೆ. At least ನಾನು ತಂದಂತಹ ಎಂಜಲವನ್ನಾದರೂ ಕೂಡ ರಸ್ತೆಗೆ ಹಾಕುತ್ತೇವೆ. ಅವುಗಳು ಅದನ್ನು ತಿಂದುಕೊಂಡು ನಮ್ಮ ಹೊಲ ಮನೆಗಳನ್ನು ಕಾಯ್ದುಕೊಂಡು ಮತ್ತು ನಮ್ಮನ್ನು ರಕ್ಷಣೆ ಮಾಡಿಕೊಂಡು ಇರುತ್ತವೆ.

ಆದರೆ ಪಟ್ಟಣ ಪ್ರದೇಶದಲ್ಲಿ ಏನಾಗಿದೆ ಎಂದರೆ ಇಲ್ಲೆಲ್ಲಾ ತಂಗಳು ಪೆಟ್ಟಿಗೆ, ಹೊರಗಡೆಗೆ ಏನೂ ತಂದು ಹಾಕುವ ಹಾಗೆ ಇಲ್ಲ. ಏನಾದರೂ ಉಳಿದರೆ ಅದನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ಇಟ್ಟು, ಬೆಳಿಗ್ಗೆ ಕಾರ್ಪೋರೇಷನ್‌ನವನು ಬಂದಾಗ ಅವನಿಗೆ ಹಾಕಿ ಕಳುಹಿಸಿಬಿಡುತ್ತಾರೆ. ಆದರೆ ಆ ನಾಯಿಗಳಿಗೆಲ್ಲಾ ಉಪವಾಸ. ಉಪವಾಸ ಇದ್ದಂತಹ ನಾಯಿಗಳು ಏನು ಮಾಡುವುದಕ್ಕೆ ಸಾಧ್ಯ ಹೇಳಿ ನೋಡೋಣ. ಇವತ್ತು ಕಾಡಿನಲ್ಲಿರುವ ಪ್ರಾಣಿಗಳು ಎಂದರೆ ಆನೆಗಳೆಲ್ಲಾ ನಗರಕ್ಕೆ ಬರುವುದಕ್ಕೆ ಕಾರಣವೇನು? ಕಾಡಿನ ಪ್ರಾಣಿಗಳು ಇವತ್ತು ನಗರಕ್ಕೆ ಬಂದು ಆಹಾರವನ್ನು ಕೇಳುವಂತಹ ಪರಿಸ್ಥಿತಿ ಏಕೆ ನಿರ್ಮಾಣವಾಗಿದೆ ಎಂದರೆ ಕಾಡು ನಾಶವಾಗುತ್ತಿದೆ. ಕಾಡಿನಲ್ಲಿ ನೀರಿಲ್ಲ. ಪ್ರಾಣಿಗಳಿಗೆ ಸರಿಯಾದ ಆಹಾರ ಸಿಗುತ್ತಿಲ್ಲ. ಈ ಕಾರಣಕ್ಕೆ ಹೊಲ-ಗದ್ದೆಗಳನ್ನು ನಾಶ ಮಾಡಿ, ಆಹಾರ ಮತ್ತು ನೀರನ್ನು ಹುಡುಕಿಕೊಂಡು ಬಂದಿರುವಂತಹ ಉದಾಹರಣೆ ಇದೆ. ಹೀಗಿದ್ದಾಗ ನಾವು ಎಲ್ಲಾ ಆನೆಗಳನ್ನು ಕೊಲ್ಲುವುದಕ್ಕಾಗುತ್ತದೆಯೇ?

ಆದುದರಿಂದ ಸರ್ಕಾರಕ್ಕೆ ಸರಿಯಾದಂತಹ ನಿರ್ದೇಶನವನ್ನು ಕೊಡಬೇಕು. ಇಲ್ಲಿ ಪ್ರತಿಯೊಂದು ಪ್ರಾಣಿ, ಜೀವಸಂಕುಲಗಳು ಬದುಕುವುದಕ್ಕೆ ಅವಕಾಶವಿರುವುದರಿಂದ ಈ ಸರ್ಕಾರ ಮತ್ತು ಸಮಾಜ ನಾಯಿಗಳ ನಿರ್ನಾಮಕ್ಕೆ ಏನು ಕೈಹಾಕಿದೆ ಅದನ್ನು ಕೈಬಿಡಬೇಕು. ಯಾವ ನಾಯಿ ಜನರನ್ನು ಕಚ್ಚುತ್ತವೆ,

ಅವುಗಳಿಗೆ ಸರಿಯಾದ ಚಿಕಿತ್ಸೆಯನ್ನು ಕೊಟ್ಟು, ಅವುಗಳ ರಕ್ಷಣೆಗೆ ಸರ್ಕಾರ ಮುಂದಾಗಬೇಕು. ಸರ್ಕಾರದವರು ಉತ್ತರ ಕೊಟ್ಟಿದ್ದಾರೆ, ಅದರಲ್ಲಿ ನಾವು ಯಾವ ನಾಯಿಗಳನ್ನೂ ಕೊಂದಿಲ್ಲವೆಂದು ಹೇಳಿದ್ದಾರೆ. ಪೇಪರ್‌ನಲ್ಲಿ ಬಂದಿದೆ. ಇದನ್ನು ನೋಡಿದ ಮೇಲೆ ಕಣ್ಣೀರು ಬರುತ್ತದೆ. ಯಾವುದೋ ಒಂದು ಮಗುವಿಗೆ ನಾಯಿ ಕಚ್ಚಿದೆ, ಆ ಮಗು ಸತ್ತಿದೆ, ಇನ್ನೊಂದು ದೃಶ್ಯವನ್ನು ನೀವು ನೋಡಬಹುದು. ನಾಯಿ ಎಂಥ ಪವಿತ್ರವಾದದ್ದು ಎಂದು. ಇದು ತುಮಕೂರಿನಲ್ಲಿ ಇರಬಹುದು, ದೇವರಾಯನ ದುರ್ಗದಲ್ಲಿ ನಡೆದ ಒಂದು ಪ್ರಮುಖವಾದಂಥ ಘಟನೆ, ದೇವರಾಯನ ದುರ್ಗದಲ್ಲಿ ಮೂರು ಬೀದಿ ನಾಯಿಗಳು ಅವು ಊಟ ಮಾಡಲಿಲ್ಲ, ಏನೂ ಮಾಡಲಿಲ್ಲ. ಅವು ಏನು ಮಾಡಿದವೆಂದರೆ, ಒಬ್ಬ ಹೆಂಗಸು ಅನಧೀಕೃತವಾಗಿ, ಅದನ್ನು ಹೇಳಬಾರದು, ಈ ಹೆಂಗಸು ಹಸುಗೂಸನ್ನು ಹಡೆದು ಒಂದು ತೊಟ್ಟಿಯಲ್ಲಿ ಹಾಕಿ ಹೋದಳು. ಆ ಕೂಸನ್ನು ನಾಯಿಗಳು ರಾತ್ರಿಯೆಲ್ಲಾ ಬೊಗಳುತ್ತಾ ಆ ಕೂಸಿನ ಸುತ್ತಾ ಓಡಾಡುತ್ತಾ ಕಾವಲು ಕಾದವು.

ಅಂದ ಮೇಲೆ ನಾಯಿ ಕೂಸನ್ನು ಕಚ್ಚಿ ಹಾಕಿತ್ತು ಎಂದರೆ, ಈ ಹಸಿದ ನಾಯಿಗಳು ಆ ಶಿಶುವನ್ನು ತಿನ್ನಬಹುದಾಗಿತ್ತು. ಆದರೆ, ಆ ನಾಯಿಗಳು ಆ ಕೆಲಸವನ್ನು ಮಾಡಲಿಲ್ಲ. ಮಾರ್ಚ್ ತಿಂಗಳ 9 ನೇ ತಾರೀಖಿನ ಕನ್ನಡ ಪ್ರಭ ದಿನಪತ್ರಿಕೆಯಲ್ಲಿ ಈ ವಿಷಯ ವರದಿಯಾಗಿದೆ. ಈ ನಾಯಿಗಳು ಆ ಮಗುವನ್ನು ಕಾವಲು ಇದ್ದು, ಜೀವವನ್ನು ಉಳಿಸಿದಿವೆಂಬ ವರದಿ ಬಂದಿದೆ. ಅದೇ ರೀತಿ ಕೋಲ್ಕತ್ತಾದಲ್ಲೂ ಕೂಡ ಇಂಥಾದ್ದೇ ಒಂದು ಘಟನೆಯಾಗಿದೆ. ದೊಡ್ಡ ಆಂಗ್ಲ ಪತ್ರಿಕೆಯಲ್ಲಿ ಕೂಡ ಬಂದಿದೆ, ಹೀಗೆ ಇರುವಾಗ ನಮ್ಮನ್ನೆಲ್ಲಾ ಕಾಯುವಂಥ, ರಕ್ಷಣೆ ಮಾಡುವಂಥಾ, ನಾಯಿಗಳನ್ನು ನೀವು ನಿರ್ನಾಮ ಮಾಡಿದರೆ, ಬೆಂಗಳೂರಿನಲ್ಲಿ ಐ.ಟಿ.ಬಿ.ಟಿ ಗಳು, ದೊಡ್ಡ ದೊಡ್ಡ ಸ್ಮಗ್ಲರ್‌ಗಳು, ಶ್ರೀಮಂತರೆಲ್ಲಾ ವಾಸ ಮಾಡುತ್ತಿದ್ದಾರಲ್ಲಾ, ಅವರ ಮನೆಗಳಿಗೆ ದಿನನಿತ್ಯ ಕನ್ನಾ ಹಾಕುವಂಥಾ ಕಳ್ಳರು ಜಾಸ್ತಿಯಾಗುತ್ತಾರೆ.

ಎಲ್ಲಿ ನಾಯಿಗಳಿವೆ, ಅಲ್ಲಿ ಕಳ್ಳತನವಾಗುತ್ತಿಲ್ಲ. ನಾಯಿಗಳು ನಾಶವಾದರೆ, ಕಳ್ಳರಿಗೆ ಅವಕಾಶ ಮಾಡಿ ಕೊಟ್ಟ ಹಾಗೆ ಆಗುತ್ತದೆ. ಅದುದರಿಂದ ಈ ಒಂದು ದೃಷ್ಟಿಯಿಂದ ಮಾನ್ಯ ಮಂತ್ರಿಗಳಿಗೂ ಗೊತ್ತಿರಬಹುದು. ಗುರುಗಳನ್ನು ಹೋಗಿ ನೋಡಿ, ಕಾಲಭೈರವ ನಾಯಿಯ ಒಂದು ಅವತಾರ, ನಮ್ಮ ಗುರುಗಳು ಇದ್ದಾರಲ್ಲಾ, ಆದಿಚುಂಚನಗಿರಿ ಸ್ವಾಮಿ, ನಮ್ಮ ಮಠ ಇದೆಯಲ್ಲಾ, ಅದಕ್ಕೆ ಮತ್ತೊಂದು ಹೆಸರು

ಇದರಿಂದ ಬಂದಿರುವಂಥಾದ್ದು. ಆದುದರಿಂದ ಇಲ್ಲಿ ಆರೋಗ್ಯ ಮಂತ್ರಿಗಳಾಗಿ ಅಶೋಕ್‌ರವರು ಇದ್ದಾರೆ. ಅವರು ಇವತ್ತು ಸದನದಲ್ಲಿ ಇಲ್ಲ. ಅವರು ಇಲ್ಲಿ ಇದ್ದಿದ್ದರೆ ಅ ವರಿಗೆ ಸರಿಯಾಗಿ ಹೇಳುತ್ತಾ ಇದ್ದೆ. ಯಾವನೋ ಒಬ್ಬ ರಾಜೀನಾಮೆ ಕೊಡು ಎಂದು ಹೇಳಿದನಂತೆ, ಅದಕ್ಕೆ ಇಡೀ ನಾಯಿಗಳನ್ನೆಲ್ಲಾ ಕೊಂದು ಹಾಕಿ ಬಿಡುವುದಾ? ಅವರ ಪಾರ್ಟಿ ಎಂ.ಎಲ್.ಎ. ಹೇಳಿ ಬಿಟ್ಟರು. ಅಶೋಕ್ ಈ ಮಗುವನ್ನು ರಕ್ಷಣೆ ಮಾಡುವುದಕ್ಕೆ ಆಗಲಿಲ್ಲ. ಅದಕ್ಕೆ ನಾಯಿಗಳನ್ನು ಬೆಳೆಯುವುದಕ್ಕೆ ಬಿಡುವುದಿಲ್ಲವೆಂದು ಹೇಳಿದರಂತೆ, ಅದಕ್ಕೆ ಕಾರ್ಪೋರೇಷನ್‌ನವರನ್ನು ಕರೆದುಕೊಂಡು ಬಂದು ಹೊಡೆಯೆಂದು ಹೇಳಿ ಬಿಡುವುದಾ? ಇದು ಏನು ತುಘಲಕ್ ಸರ್ಕಾರವೇ?

ಆದುದರಿಂದ ದಯಮಾಡಿ ಸರ್ಕಾರಕ್ಕೆ ಸರಿಯಾದ ಎಚ್ಚರಿಕೆಯನ್ನು ಕೊಟ್ಟು ನಾಯಿಗಳ ಹತ್ಯೆಯನ್ನು ತಡೆಗಟ್ಟಬೇಕೆಂದು ಹೇಳಿ, ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ನಮಗೆ ಇಂಥ ಮೂಕ ಪ್ರಾಣಿಗಳ ಬಗ್ಗೆ ಮಾತನಾಡುವಂಥ ಅವಕಾಶವನ್ನು ಕಲ್ಪಿಸಿಕೊಟ್ಟದ್ದಕ್ಕೆ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) :– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇದರ ಬಗ್ಗೆ ಈಗಾಗಲೇ ಈ ರೀತಿ ಘಟನೆಗಳು ನಡೆಯದ ಹಾಗೆ, ಮುನ್ನೆಚ್ಚರಿಕೆಯನ್ನು ತೆಗೆದುಕೊಂಡಿದ್ದೇವೆ. ಇನ್ನು ಮುಂದೆ ಈ ರೀತಿಯ ಅಹಿತಕರ ಘಟನೆಗಳು, ನಡೆಯಲು ಅವಕಾಶ ನೀಡದಂತೆ ಹಾಗೂ ಬೀದಿ ನಾಯಿಗಳ ಸಂತತಿಯನ್ನು ಕಾನೂನಿನ ಚೌಕಟ್ಟಿನಲ್ಲಿ ನಿಯಂತ್ರಿಸಲು ಪ್ರಾಣಿಗಳ ಜನನ ನಿಯಂತ್ರಣ ನಿಯಮ 2001 ರಂತೆ ಬೀದಿ ನಾಯಿಗಳ ಜನನ ನಿಯಂತ್ರಣ ಕಾರ್ಯಕ್ರಮವನ್ನು ಹಮ್ಮಿ ಕೊಳ್ಳುವಂತೆ ಹಾಗೂ ಸಂಶಯಾತ್ಮಕವಾದ ನಾಯಿಗಳನ್ನು ಹಾಗೂ ರೋಗ ಪೀಡಿತ ನಾಯಿಗಳನ್ನು ಹೊರತುಪಡಿಸಿ ಯಾವುದೇ ನಾಯಿಗಳನ್ನು ಕೊಲ್ಲಬಾರದೆಂದು ಎಲ್ಲಾ ನಗರ ಸಂಸ್ಥೆಗಳಿಗೆ ಸರ್ಕಾರ ಕಟ್ಟುನಿಟ್ಟಿನ ಆದೇಶವನ್ನು ಕೊಟ್ಟಿದೆ.

ಮಕ್ಕಳನ್ನು ರಕ್ಷಣೆ ಮಾಡುವಂಥಾದ್ದು ಎಷ್ಟು ಮುಖ್ಯವೋ, ಪ್ರಾಣಿಗಳನ್ನು ಉಳಿಸಬೇಕಾದ್ದು ಅಷ್ಟೆ ಮುಖ್ಯವಾದ್ದರಿಂದ, ಈ ಘಟನೆ ಮತ್ತೆ ಎಲ್ಲೂ ಮರುಕಳಿಸದಂತೆ ಸರ್ಕಾರ ಕ್ರಮವನ್ನು ತೆಗೆದುಕೊಳ್ಳುತ್ತದೆ.